ಹೆಂಡತಿ ಒಬ್ಬರು ಇನ್ನೊಬ್ಬರ ಸಮಯಕ್ಕಾಗದೆ ಇದ್ರೆ ಮದ್ವೆ ಆಗಿ ಏನು ಸುಖ' ಎಂದು ಸುಮ್ಮನಾದೆ.

*****

ನಮ್ಮ ಡಾಕ್ಟರ್ ಭೇಟಿಗಾಗಿ ಕಾಯುತ್ತಿದ್ದೆ. ಒಬ್ಬ ಪೇಶಂಟ್ ಡಾಕ್ಟರನ್ನ ಭೇಟಿ ಮಾಡಿ ಹೊರಬಂದು ತನ್ನವರೊಡನೆ 'ಕೊಳಕು ಮಂಡ್ಲ ಆವಂತೆ ಕಡಿದಿರೋದು, ಇಂಗ್ಲೇಸನ್ ತಗಬೇಕಂತೆ' ಎಂದು ಹೇಳುತ್ತಿದ್ದ. ಅವನ ಎಡ ಪಾದವೆಲ್ಲಾ ಕಪ್ಪಗೆ ಟಾರ್ ಬಣ್ಣ ತಳೆದಿತ್ತು. ಸರಿ, ಹಿಂತಿರುಗುವಾಗ ಚಾಲಕನ ವಾಗ್ಝರಿಗೆ ಕಿವಿ ಕೊಡಬೇಕಾಯಿತು. 'ಅಮ್ಮಾ, ಮಂಡಲದ ಆವಲ್ಲಿ ಎರಡು ತರ ಅವೆ. ಕೊಳಕು ಮಂಡ್ಲ ಮತ್ತೆ ಊಸ್ ಮಂಡ್ಲ. ಇವನಿಗೆಲ್ಲೊ ಊಸ್ ಮಂಡ್ಲ ಉಸಿರು ಬಿಟ್ಟೈತೆ, ಅದೇನಾದ್ರು ಕೊಳಕ್ ಮಂಡ್ಲ ಆಗಿದ್ರೆ ಕಾಲು ಕೊಳೆತೇ ಓಗೋದು. ಒಂದು ಸತಿ ಏನಾಯ್ತು ಅಂತೀರಾ?'

'ನಮ್ಮ ತಮ್ಮನ ಮಗನ್ಗೆ ಮೈಯೆಲ್ಲಾ ನಾಗರು ಆಗಿತ್ತು. ಮತ್ತಿ ತಾಳೇಶ್ವರನ ದೇವಸ್ಥಾನ ಗೊತ್ತಲ್ಲ, ಅಲ್ಲಿಗೆ ಪೂಜೆ ಮಾಡಸ್ಕಂಡು ಬರಕೆ ಓದೊ. ನಾವು ಮನೇಲೇ ಭಾತು, ಪಾಯಸಕ್ಕೆ ಕಾರ, ಕಾಯಿ ಆಡಸ್ಕಂಡು, ಅಕ್ಕಿ, ಪಾತ್ರೆ, ಸೌದೆ ಎಲ್ಲಾ ಆಟೋಗೆ ಆಕ್ಕಂಡು ಓಗಿ, ಪೂಜೆ ಮಾಡ್ಸಿ, ಒಂದು ಮರದ ಕೆಳಗೆ ಮೂರು ಕಲ್ಲಿನ ಒಲೆ ಆಕಿ ತರಕಾರಿ ಭಾತ್ ಮಾಡಿ ಆಯ್ತು. ಪಾಯ್ಸ ಕಾಯ್ಸಕ್ಕೆ ಇಟ್ಟು, ಇನ್ನೇನು ಪಾಯ್ಸ ಆಯ್ತು ಅನ್ನೋವಾಗ ಸೌದೆ ಎಳದು ಆಕಾಯಿತು. ಆಗ ಒಲೆಲಿದ್ದ ಕೆಂಡ, ಬೂದೀಲಿ ಏನೊ ಮಿಸುಕಾಡ್ದಂಗಾಗಿ 'ಬುಸ್' ಅಂತ ಶಬ್ದ ಆಯ್ತು. ಆವು ಮೈಮುರ್ಕಂಡು ಮೇಲಕ್ಕೆ ಎದ್ದೇಟಿಗೆ ಪಾಯ್ಸದ ಪಾತ್ರೆ ಅಲ್ಲಾಡಿ ಉಂಟೋಯ್ತು. ಆವು ಸರ್ರನೆ ಅರ್ಕಂಡೋಯ್ತು. ನಾವೆಲ್ಲ ಬೆಚ್ಚಿ ಬೆರಗಾದ್ವಿ. ಉಣ್ಣಕ್ಕೆ ಮನಸ್ಸು ಬರ್ನಿಲ್ಲ. ಭಾತುಗೀತು ಎಲ್ಲಾ ಅಲ್ಲೇ ಗುಡ್ಡೆ ಆಕಿ, ಕಡ್ದು ಬಂದೊ. ದಾರೀಲಿ ಒಂದು ಕೈ ಒಟ್ಲಲ್ಲಿ ಇಡ್ಲಿ ತಿಂದು, ಟೀ ಕುಡ್ಕಂಡು ಬಂದೊ. ಆ ಆವು ಊಸ್ ಮಂಡ್ಲ ಅಂತೆ. ಅದು ತೆಳ್ಳಗಿರೊ ಮಣ್ಣು, ತರಗಿನ ಕೆಳಗೆ ಮಲಗಿರ್ತದಂತೆ. ಸುಲಭಕ್ಕೆ ಏಳೊದಿಲ್ವಂತೆ. ಬಿಸಿಲು, ಶಾಖ ಚೆನ್ನಾಗಿ ತಟ್ಟಿದಾಗ

